

ಪ್ರದಕ್ಷಿಣೆ ಮಾಡುತ್ತಿದ್ದ ಅಮ್ಮನಿಗಾಗಿ ಕಾದಿದ್ದರು. 'ನಿಮ್ಮ ಫೋಟೋ ಕ್ಲಿಕ್ಕಿಸಲಾ?' ಎಂದು ಕೇಳಿದಾಗ ಮುಗ್ಧವಾಗಿ ನಕ್ಕು ತಲೆಯಾಡಿಸಿದರು. ನನ್ನ ಮಗ ಓಂ ಕೂಡ ಅವರ ನಡುವೆ ಕುಳಿತು ಫೋಟೋ ತೆಗೆಸಿಕೊಂಡ.

ಭೂತಾನ್‌ನಲ್ಲಿ ಮಕ್ಕಳು ಸಿಕ್ಕಾಗ ಕೊಡಬೇಕೆಂದು ಇಟ್ಟುಕೊಂಡಿದ್ದ ಚಾಕೋಲೇಟ್‌ಗಳನ್ನು ರೂಮಿನಲ್ಲೇ ಬಿಟ್ಟಿದ್ದೆ. ಬೇಸರವಾಯಿತು. ನನ್ನ ಕ್ಯಾಮೆರಾ ಕಿಟ್‌ನಲ್ಲಿ ಇಟ್ಟುಕೊಂಡಿದ್ದ ಚಿಟ್ಟೆಗಳ ಬಗೆಗಿನ ನನ್ನ ಪುಟ್ಟ ಪುಸ್ತಕವನ್ನು ಆ ಮಕ್ಕಳಿಗೆ ಅವರಿಗೆ ಕೊಟ್ಟೆ. ಪುಸ್ತಕದಲ್ಲಿನ ಚಿಟ್ಟೆಗಳನ್ನು ನೋಡುತ್ತಾ ಖುಷಿಪಟ್ಟು ನಗುತ್ತಾ ಧನ್ಯವಾದವನ್ನು ತಿಳಿಸಿದರು. ಅವರ ತುಂಬು ಕೆನ್ನೆಯನ್ನು ಗಿಂಟಿ, ತಲೆ ಸವರಿ ಫೋಟೋ ತೆಗೆಸಿಕೊಂಡಿದ್ದಕ್ಕೆ ನಾನೂ ಥ್ಯಾಂಕ್ಸ್ ಹೇಳಿದೆ.


## ತಾಯಿಯ ಅಪ್ಪುಗೆ

ಥಿಂಪುವಿನ ಹಳೆಯ ದೇವಾಲಯ ಚಂಗಂಖಾ ಲಾಖಾಂಗ್‌ಗೆ ಹೋದೆವು. ಹನ್ನೆರಡನೇ ಶತಮಾನದಲ್ಲಿ ನಿರ್ಮಾಣವಾದ ಆ ದೇವಾಲಯ ಒಂದು ಸಣ್ಣ ಗುಡ್ಡದ ಮೇಲಿದೆ. ಅಲ್ಲಿನವರು ಮಕ್ಕಳಿಗೆ ಹೆಸರಿಡಲು ಹಾಗೂ ತಮ್‌ದ್ರಿನ್ ಎಂಬ ಅಲ್ಲಿನ ದೇವರಿಂದ ಆಶೀರ್ವಾದ ಪಡೆಯಲು ಪುಟ್ಟ ಮಕ್ಕಳನ್ನು ಕರೆತರುತ್ತಾರೆ. ಬೆನ್ನಿಗೆ ಎಳೆ ಮಕ್ಕಳನ್ನು ಬಟ್ಟೆಯಿಂದ ಕಟ್ಟಿಕೊಂಡು ಸರಾಗವಾಗಿ ಮೆಟ್ಟಿಲು ಹತ್ತಿ ಹೋಗುವ ಹಲವಾರು ತಾಯಂದಿರು ಅಲ್ಲಿ ಕಂಡರು. ಕೆಲವರನ್ನು ನಿಲ್ಲಿಸಿ ಫೋಟೋ ಕ್ಲಿಕ್ಕಿಸಿದೆ.

ಪುಟ್ಟ ಗೋಲಿ ಕಣ್ಣುಗಳ, ತುಂಬುಕೆನ್ನೆಯ ಭೂತಾನ್ ಮಕ್ಕಳು ನೋಡಲು ಬಲು ಮುದ್ದಾಗಿರುತ್ತಾರೆ. ಫೋಟೋ ತೆಗೆದು ನನ್ನ ಜೇಬಲ್ಲಿಟ್ಟುಕೊಂಡಿದ್ದ ಚಾಕೋಲೇಟ್ ಕೊಡುತ್ತಿದ್ದೆ. ಖುಷಿಯಿಂದ ಪಡೆಯುತ್ತಿದ್ದರು. ಆ ತಾಯಂದಿರು ಮಕ್ಕಳನ್ನು ಅಪ್ಪಿಕೊಳ್ಳುವ ರೀತಿಯಲ್ಲಿ ಬೆನ್ನಿಗೆ ಕಟ್ಟಿಕೊಳ್ಳುವ ರೀತಿಯೇ ನೋಡಲು ಚೆನ್ನ. ಸಾಮಾನು ಸರಂಜಾಮುಗಳನ್ನು ಹೊತ್ತುಕೊಂಡು, ಮಗುವಿನ ಸಂಗಡ ಬೆಟ್ಟ ಗುಡ್ಡಗಳ ಪ್ರದೇಶವನ್ನು ಸರಾಗವಾಗಿ ಹತ್ತಿಳಿಯಲು, ಅವರು ಕಂಡುಕೊಂಡ ಉಪಾಯವಿದು.

## ಸೌಜನ್ಯ

ಭೂಮ್ ತಾಂಗ್ ಎಂಬ ಪ್ರದೇಶದಲ್ಲಿ ಬೆಟ್ಟವೊಂದರ ಮೇಲಿರುವ ಝುಕರ್ ಝೋಂಗ್ ನೋಡಲು ಹೋದೆವು. ಅಲ್ಲಿನ ಪ್ರಕೃತಿ ಸೌಂದರ್ಯದಿಂದಾಗಿ ಈ ಝೋಂಗ್ ಪ್ರಸಿದ್ಧವಾಗಿದೆ. ಅಲ್ಲಿನ ಒಂದೊಂದು ದ್ವಾರವೂ ಬೃಹದಾಕಾರವಾಗಿದ್ದು ಎಲ್ಲವನ್ನೂ ಸುಂದರವಾಗಿ ಬಣ್ಣಗಳಿಂದ ಚಿತ್ರಿಸಲಾಗಿದೆ. ಅಲ್ಲಿನ ಹಸಿರು ಹುಲ್ಲು, ಬಣ್ಣದ ಹೂಗಿಡಗಳು, ಮರಗಳು, ಜಿನುಗುತ್ತಿದ್ದ ಮಳೆಹನಿ, ದೂರದಲ್ಲಿ ಕಾಣುವ ಕಣಿವೆ, ಕಲಾತ್ಮಕ ಕಟ್ಟಡ ಕಿಂದರಿಜೋಗಿಯ ಲೋಕದಂತಿತ್ತು.



ಝೋಂಗ್‌ನಲ್ಲಿ ಮಕ್ಕಳು ಸಿಕ್ಕಾಗಲೆಲ್ಲಾ ಅವರ ಫೋಟೋ ಕ್ಲಿಕ್ಕಿಸುವುದು ಮತ್ತು ಅವರಿಗೆ ಚಾಕೋಲೇಟ್‌ಗಳನ್ನು ಕೊಡುವುದು ಮಾಡುತ್ತಿದ್ದೆ. ಅಲ್ಲೂ ಝೋಂಗ್ ಒಳಗೆ ಸಿಕ್ಕ ಹುಡುಗರಿಗೆ ಚಾಕೋಲೇಟ್ ಕೊಟ್ಟಾಗ ಒಬ್ಬ, 'ನನಗೆ ಹೊರಗೆ ಕೊಟ್ಟಿದ್ದಿರಿ, ಬೇಡ' ಎಂದು ನಿರಾಕರಿಸಿದ. ಎರಡನೇ ಬಾರಿ ಬೇಡ ಎನ್ನುವ ಅವನ ಸೌಜನ್ಯ ಕಂಡು ಖುಷಿಯಾಗಿ ಒತ್ತಾಯಮಾಡಿ ಚಾಕೋಲೇಟ್ ಕೊಟ್ಟೆ.

## ಪ್ರೀತಿಯ ಪಾಠ

ಇಲ್ಲೊಂದು ವಿಶೇಷ ಸಂಗತಿಯನ್ನು ಹೇಳಬೇಕು. ಭೂತಾನ್‌ನಲ್ಲಿ ಮಕ್ಕಳು ತಮ್ಮ ಎರಡೂ ಕೈಗಳನ್ನು ಸೇರಿಸಿಕೊಂಡು ಪ್ರೀತಿಭಾವದಿಂದ ನಾವು ಕೊಡುವ ಚಾಕೋಲೇಟ್ ಅಥವಾ ತಿಂಡಿಯನ್ನು ಪಡೆಯುತ್ತಾರೆ. ಅವರ ಸೌಜನ್ಯ, ಆಪ್ತತೆ, ವಿನಮ್ರತೆ ಕಂಡು ಸಂಕೋಚವಾಗುತ್ತದೆ. ಅವರು ನಮ್ಮಿಂದ ತಿಂಡಿಯನ್ನಲ್ಲ, ಪ್ರೀತಿಯನ್ನು ಪಡೆಯುವಂತೆ ಭಾಸವಾಗುತ್ತದೆ. ನಾನು ಕೊಟ್ಟದ್ದು ದೊಡ್ಡದಲ್ಲ, ಅವರು ಸ್ವೀಕರಿಸಿದ್ದು ದೊಡ್ಡದು ಎನ್ನಿಸಿತು. ತೆಗೆದುಕೊಳ್ಳುವವರು ಅಷ್ಟು ಪ್ರೀತಿಯಿಂದ ಪಡೆದರೆ, ಕೊಡುವವರು ಮತ್ತಷ್ಟು ಪ್ರೀತಿಯಿಂದ ಕೊಡಬೇಕೆಂಬ ಪಾಠವನ್ನು ಅವರು ನನಗೆ ಕಲಿಸಿಕೊಟ್ಟರು.

ಪ್ರತಿಕ್ರಿಯಿಸಿ: **feedback@sudha.co.in**